# ಶಿವಯೋಗಿ ಶ್ರೀ ಸಿದ್ಧರಾಮೇಶ್ವರ

ಸ್ವಾಮಿ ತೀರ್ಥಕರಾನಂದ

೧೨ನೇ ಶತಮಾನದಲ್ಲಿ ಕನ್ನಡನಾಡಿನಲ್ಲಿ ನಡೆದ ಧಾರ್ಮಿಕ ಚಳವಳಿಯ ಮೂಲಕ ಪ್ರಸಿದ್ಧರಾದ ವೀರಶೈವ ಸಂತರ ಸಾಲಿನಲ್ಲಿ ಬರುವ ಸಿದ್ಧರಾಮೇಶ್ವರನ ಸಂಕ್ಷಿಪ್ತ ಜೀವನ ಚಿತ್ರವನ್ನಲ್ಲಿ ನೀಡಲಾಗಿದೆ. ಅತ್ಯಂತ ಎಳವೆಯಲ್ಲಿ ಯಾರು ಭಕ್ತಿ, ಭಾವ, ವ್ಯಾಕುಲತೆಗಳಿಂದ ಭಗವಂತನನ್ನು ಅರಸುತ್ತಾರೋ ಅವರು ಬಹಳ ಬೇಗನೆ ಸಾಕ್ಷಾತ್ಕಾರವನ್ನು ಪಡೆಯುವರು ಎಂಬ ಶ್ರೀರಾಮಕೃಷ್ಣರ ಮಾತಿಗೆ ಇವರ ಜೀವನ ಅತ್ಯುತ್ತಮ ನಿದರ್ಶನವಾಗಿದೆ. ಲೇಖಕರು ದಾವಣಗೆರೆ ಶ್ರೀರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಒಮ್ಮೆ ಅದ್ರಿಶಿರ, ಊರ್ಧ್ವಶಿರರೆಂಬ ಗಂಧರ್ವರಿಬ್ಬರು ಪರಶಿವನ ಆಸ್ಥಾನಕ್ಕೆ ಬರುತ್ತಿರುವಾಗ ಮಾರ್ಗಮಧ್ಯದಲ್ಲಿ ಭೃಂಗಿಯನ್ನು ಕಂಡು ನಕ್ಕುಬಿಡುತ್ತಾರೆ. ತನ್ನನ್ನು ಅರಿತೂ ಅರಿಯದವರಂತೆ ನೋಡಿ ನಕ್ಕರಲ್ಲಾ ಎಂದು ಅವರ ಮೇಲೆ ಕೋಪಗೊಂಡ ಭೃಂಗಿ, ''ಮರ್ತ್ಯಲೋಕದಲ್ಲಿ ನರರಾಗಿ ಹುಟ್ಟಿ ಸತಿಪತಿಗಳಾಗಿ ನೀವು'' ಎಂದು ಶಾಪ ಕೊಡುತ್ತಾನೆ, ಹಠಾತ್ತಾನೆ ಶಾಪಕ್ಕೆ ಗುರಿಯಾದ ಗಂಧರ್ವರು, ಶಾಪ ವಿಮೋಚನೆ ಮಾಡಬೇಕೆಂದು ಭೃಂಗಿಗೆ ದೈನ್ಯದಿಂದ ಬೇಡಿಕೊಳ್ಳುತ್ತಾರೆ. ಆಗ ಭೃಂಗಿಯು ಅವರ ತಪ್ಪನ್ನು ಕ್ಷಮಿಸಿ, ಅವರಿಗಾಗಿ ಮನಸ್ಸಿನಲ್ಲಿ ಲೇಸನ್ನೇ ಬಯಸುತ್ತಾ, ''ಭೂಲೋಕದಲ್ಲಿ, ಒಬ್ಬ ಜಡನಂತಿರುವ, ಮೂಗನಂತಿರುವ ಜಿತೇಂದ್ರಿಯನಾಗಿರುವ ಶಿವಜ್ಞಾನಿ ನಿಮ್ಮ ಮಗನಾಗಿ ಜನಿಸಲು ನಿಮ್ಮ ಶಾಪವಿಮೋಚನೆಯಾಗುತ್ತದೆ'' ಎಂದು ಹೇಳಿ ಶಾಪವಿಮೋಚನೆಯನ್ನು ಕರುಣಿಸುತ್ತಾರೆ. ಇಷ್ಟೆಲ್ಲ ಗುಣಗಳುಳ್ಳ ಶಿವಜ್ಞಾನಿ ತಮ್ಮಂತವರಿಗೆ ಮಗನಾಗಿ ಹುಟ್ಟುವ ಬಗೆ ಹೇಗೆ ಎಂದು, ಗಂಧರ್ವರು ಅನುಮಾನ ವ್ಯಕ್ತಪಡಿಸಿದಾಗ, ಭೃಂಗಿಯು, ''ನೀವು ಹೋಗಿ ಶಿವನನ್ನೇ ಕೇಳಿ'' ಎಂದು ಹೇಳಿ ಹೊರಟು ಹೋಗುತ್ತಾನೆ. ಶಾಪಭಂಗಿತರಾದ ಗಂಧರ್ವರು ಶಿವನ ಸಾನ್ನಿಧ್ಯವನ್ನು ಸೇರಿ, ತಮಗೊದಗಿದ ಆಪತ್ತನ್ನು ನಿವೇದಿಸುತ್ತಾರೆ. ಪರಶಿವನು ''ನಾನೇ ನಿಮಗೆ ಮಗನಾಗಿ ಹುಟ್ಟಿ ನಿಮ್ಮನ್ನು ಕಾಯುವೆ''ನೆಂದು ಅಭಯ ವಚನವಿತ್ತು, ಆ ಗಂಧರ್ವರನ್ನು ಭೂಲೋಕಕ್ಕೆ ಕಳುಹಿಸುತ್ತಾನೆ. ಗಂಧರ್ವರಿಗೆ ಅಭಯವಿತ್ತು ಕಳುಹಿಸಿದ ಪರಶಿವನು, ತನ್ನ ಶರೀರವನ್ನು ಸುತ್ತಿ ಮುತ್ತಿಕೊಂಡು ಸೇವಿಸುತ್ತಿದ್ದ ಸಮತೆ, ಸತ್ವ, ನಿತ್ಯತ್ವ, ತೃಪ್ತಿ, ದಯೆ, ಭಕ್ತಿ, ಜ್ಞಾನ, ವೈರಾಗ್ಯಗಳನ್ನೆಲ್ಲಾ ತುಂಬಿ, ಒಂದು ಕಿರುಪುತ್ಥಳಿಯೊಂದನ್ನು ಮಾಡಿ, ಅದಕ್ಕೆ ತನ್ನ ಸಕಲ ಸಾಮರ್ಥ್ಯವನ್ನೂ ತುಂಬಿ, ಭೂಮಿಯ ಮೇಲೆ ಮಾನವರಾಗಿ ಜನಿಸಿದ್ದ ಗಂಧರ್ವ ದಂಪತಿಗಳಿಗೆ ಮಗುವಾಗಿ ಹುಟ್ಟುವಂತೆ ಕೃಪೆಮಾಡುತ್ತಾನೆ. ಈ ಗಂಧರ್ವರಿಬ್ಬರೂ ಕಾಲಾನುಕ್ರಮದಲ್ಲಿ ಸೊನ್ನಲಿಗೆಪುರ ಎಂಬಲ್ಲಿ ಮುದ್ದಗೌಡ ಹಾಗೂ ಸುಗ್ಗಲೆ ಅಥವಾ ಸುಗ್ಗವ್ವೆಯರಾಗಿ ಜನ್ಮ ತಾಳಿ ಸತಿಪತಿಗಳಾಗುತ್ತಾರೆ.

### ಸಿದ್ಧರಾಮನ ಜನನಿ-ಜನಕರು, ಜನ್ಮಭೂಮಿ

ಭರತ ಭೂಮಿಯ, ಈಗಿನ ಮಹಾರಾಷ್ಟ್ರ ರಾಜ್ಯದ, ಸೊಲ್ಲಾಪುರ, ಆಗಿನ ಸುವರ್ಣವಲ್ಲಿ = ಸೊನ್ನಲಿಗೆಪುರ = ಸೊಲ್ಲಾಪುರ



ಎಂಬ ಸ್ಥಳದಲ್ಲಿ ಕುಡಿಯರ ಕುಲದ ಗೌಡ ಮನೆತನದಲ್ಲಿ ಜನಿಸಿದ ಸುಗ್ಗವ್ವೆ (ಸುಗ್ಗಲಾದೇವಿ) ಕಾಲಾನುಕ್ರಮದಲ್ಲಿ ಸತಿಪತಿಗಳಾಗುತ್ತಾರೆ.

ಸುಗ್ಗವ್ವೆ, ಆರು ಸಲ ಗರ್ಭ ತಳೆದಳು; ಅವಳ ದೇಹದ ಐದು ದೋಷಗಳು ಕಳೆದು ಹೋದವೋ ಎಂಬಂತೆ ಐದೂ ಗರ್ಭಗಳೂ ನಿಲ್ಲಲಿಲ್ಲ. ಆರನೆಯ ಮಗನಾಗಿ ಬೊಮ್ಮಯ್ಯನೆಂಬ ಒಬ್ಬ ಮಗನಿದ್ದನೆಂದು ತಿಳಿದುಬರುತ್ತದೆ. ಮಹಾತ್ಮರಾದವರ ಜನನಕ್ಕೆ ಪೂರ್ವಭಾಗಿಯಾಗಿ ಅವರ ಆಗಮನವನ್ನು ಕುರಿತು ಅನೇಕ ಶುಭಸಂದೇಶಗಳು ಗೋಚರಿಸುತ್ತವೆ. ಭವಿಷ್ಯವಾಣಿಗಳು ಕೇಳುತ್ತವೆ. ವೀರಶೈವ ಧರ್ಮದ ಪಂಚಾಚಾರ್ಯರಲ್ಲಿ ಒಬ್ಬರಾಗಿದ್ದ ಶ್ರೀರೇವಣಸಿದ್ಧರು, ತ್ರಿಕಾಲೋಚಿತ ಜ್ಞಾನಿಗಳು, ಸಿದ್ಧಕುಲ ಚಕ್ರವರ್ತಿಗಳು ಅಪ್ರತಿಮ ಮಹಿಮಾನ್ವಿತರು, ಇಂತಹ ಶಿವಯೋಗಿ

ಗಳು ಒಮ್ಮೆ ಸೊನ್ನಲಿಗೆಗೆ ಬಂದು ಸುಗ್ಗವ್ವೆಯ ಗರ್ಭವನ್ನು ಮುಟ್ಟಿ ಮುಂದೆ ಹುಟ್ಟುವ ಸಿದ್ಧಶಿಶುವಿನ, ಕಾರಣಿಕ ಪುರುಷನ ಜನನದ ಸೂಚನೆಯನ್ನು ಕೊಡುತ್ತಾರೆ. ತನ್ನಂತಹ ವೃದ್ಧೆಗೆ ಮಗು ಜನಿಸುವುದೆಂತು? ಎಂದು ಸುಗ್ಗವ್ವೆ ವಿಸ್ಮಯಪಟ್ಟರೆ, ಅಪ್ರತಿಮ ಶಿವಯೋಗಿಯಾಗುವ ವ್ಯಕ್ತಿ ಹಲವು ವಿಕಾರಗಳ ಬೀಡಾದ ಯೌವನದಲ್ಲಿ ಜನಿಸಲಾರನೆಂದೂ ವಿಕಾರರಹಿತವಾದ ಮುಪ್ಪೇ ಸಿದ್ಧನ ಜನನಕ್ಕೆ ತಕ್ಕ ಕ್ಷೇತ್ರವೆಂದೂ ರೇವಣಸಿದ್ಧರು ಸಮಾಧಾನ ಹೇಳಿ ಆಕೆಯ ವಿಸ್ಮಯವನ್ನು ದೂರೀಕರಿಸಿದರು.

### ಜನನ, ಬಾಲ್ಯ, ಯೌವನ

ಸುಗ್ಗವ್ವೆಯ ಗರ್ಭದ ಐದನೆಯ ತಿಂಗಳಲ್ಲಿ ಯಾವ ಬಗೆಯ ದೈಹಿಕ ವೇದನೆಯನ್ನುಂಟುಮಾಡದೆ ಸಿದ್ಧಶಿಶು ಜನಿಸುತ್ತದೆ. ಮಗುವಿನ ಶರೀರದಲ್ಲಿ ಕೊಳೆಯಿರಲಿಲ್ಲ, ಮಲವಿಲ್ಲ, ದುರ್ಗಂಧವೂ ಇಲ್ಲ. ಮಗುವಿನ ಜನನದ ನಂತರ ಸುಗ್ಗವ್ವೆ ಸುಖನಿದ್ರೆಯಲ್ಲಿದ್ದಾಗ, ಕೈಲಾಸದಿಂದ ಪಾರ್ವತಿದೇವಿಯು ಬಂದು ಶಿಶುವಿಗೆ ಸಿದ್ಧರಾಮನೆಂಬ ಹೆಸರನ್ನಿಡಬೇಕೆಂದು ಹೇಳಿ ಹೊರಟು ಹೋಗುತ್ತಾಳೆ.

ಮುದ್ದಗೌಡನು ಆ ಮಗುವಿಗೆ ತನ್ನ ಕುಲದೈವರಾದ ಧೂಳಿ ಮಾಕಾಳನ ಹೆಸರನ್ನಿಡುತ್ತಾನೆ. ಸಿದ್ಧರಾಮನ ಬಾಲಲೀಲೆಗಳು ಕೂಡ ಶಿವಪರ, ಶಿವಮಯ. ಮನೆಯಲ್ಲಿ ಮೂಕನಾಗಿ ಸುಮ್ಮನೆ ಇರುವ ಮಗನನ್ನು ಅವರ ತಂದೆ ದನಕಾಯಲು ಅಡವಿಗೆ ಕಳುಹಿಸುತ್ತಾನೆ. ಅಡವಿಯಲ್ಲಿ ಸಿದ್ಧರಾಮನಿಗೆ ಶಿವನದರ್ಶನವಾಗಿ ಅವನಲ್ಲಿ ಶಿವಭಕ್ತಿ ಅಂಕುರಿಸುತ್ತದೆ. ದನಕಾಯುವ ನೆಪದಲ್ಲಿ ಲಿಂಗಾರ್ಚನೆಯ ಸುಖವನ್ನನುಭವಿಸುವ ಅವನ ಕಾರ್ಯ ಗೌಪ್ಯವಾಗಿ ನಡೆಯುತ್ತದೆ. ನವಣೆಯ ಹೊಲದಲ್ಲಿ ನಿಸರ್ಗದ ಸುಂದರವಾದ ಪರಿಸರದಲ್ಲಿ ಶಿವನು ತನ್ನ ವಿಶ್ವ ವ್ಯಾಪಕತ್ವದಿಂದ ಜಂಗಮ ರೂಪದಲ್ಲಿ ಬಂದು ಅಭಿವ್ಯಕ್ತನಾಗುತ್ತಾನೆ. ಆ ಜಂಗಮನಲ್ಲಿ ಸಿದ್ಧರಾಮನು ಶಿವನನ್ನು ನೋಡಿ, ಶಿವನಿಗೆ ನಮಸ್ಕರಿಸಿ ಆನಂದದಿಂದ ಕುಣಿದು ಕುಪ್ಪಳಿಸುತ್ತಾನೆ. ''ನೀನಾರು? ನೀನೆಲ್ಲಿಂದ ಬಂದೆ?'' ಎಂದು ಸಿದ್ಧರಾಮನು ಜಂಗಮನನ್ನು ಕೇಳಿದನು. ಅದಕ್ಕೆ ಆ ಜಂಗಮನು, ''ನಾನು ಶ್ರೀಶೈಲ ಪರ್ವತದಲ್ಲಿ ವಾಸವಾಗಿದ್ದೇನೆ, ನನ್ನ ಹೆಸರು ಮಲ್ಲಿನಾಥ. ನಿನ್ನ ಮೇಲಿನ ಪ್ರೀತಿಯಿಂದ ಇಲ್ಲಿಗೆ ಬಂದಿದ್ದೇನೆ. ನನಗೆ ನಿನ್ನ ಕೈಯಿಂದ ಮೊಸರನ್ನ (ಅಥವಾ ಮಜ್ಜಿಗೆ ಅಂಬಲಿ) ತಿನ್ನಲು ಆಸೆಯಾಗಿದೆ, ನನಗಾಗಿ ನೀನು ತರುತ್ತೀಯಾ?'' ಎನ್ನಲು, ಸಿದ್ಧರಾಮನು ಆ ಕ್ಷಣವೇ ಮನೆಗೆ ಹೊರಟನು. ಮನೆಯಿಂದ ಮೊಸರನ್ನು (ಮಜ್ಜಿಗೆ ಅಂಬಲಿ)ವನ್ನು ತಂದು ಸಿದ್ಧರಾಮನು ಆ ಜಂಗಮನಿಗಾಗಿ ಹುಡುಕಿದ, ಆದರೆ ಅವನೆಲ್ಲಿಯೂ ಕಾಣಲಿಲ್ಲ. ವ್ಯಾಕುಲತೆಯಿಂದ ಸಿದ್ಧರಾಮನು ಆ ಜಂಗಮನನ್ನು ಮಲ್ಲಯ್ಯ ಎಂದು ಕೂಗುತ್ತಾ ಅಲ್ಲಿ, ಇಲ್ಲಿ ಹುಡುಕಿದನು. ಇದೇ ಮಾರ್ಗವಾಗಿ ಶ್ರೀಶೈಲಪರ್ವತಕ್ಕೆ ಯಾತ್ರೆ ಹೊರಟ ಒಂದು ಗುಂಪು ಬರುತ್ತಿತ್ತು. ವ್ಯಾಕುಲತೆಯಿಂದ ಮಲ್ಲಯ್ಯ, ಮಲ್ಲಯ್ಯ ಎಂದು ಕೂಗುತ್ತಿದ್ದ ಸಿದ್ಧರಾಮನನ್ನು ಕುರಿತು, ಆ ಜನರ ಗುಂಪು, ''ನೀನು ಮಲ್ಲಯ್ಯನನ್ನು ನೋಡಬೇಕೆಂದಿದ್ದರೆ ನಮ್ಮ ಜೊತೆ ಶ್ರೀಶೈಲ ಪರ್ವತಕ್ಕೆ ಬಾ, ನಿನಗೆ ಆತನನ್ನು ತೋರಿಸುತ್ತೇವೆ'' ಎಂದು ಕರೆದುಕೊಂಡು ಹೋದರು.

ಇತ್ತ ಸಿದ್ಧರಾಮನ ತಂದೆ ತಾಯಿಯರು ಹಾಗೂ ಊರಿನ ಜನರೆಲ್ಲ ಸಿದ್ಧರಾಮನಿಗಾಗಿ ಹುಡುಕಿದರು. ಆದರೆ ಸಿದ್ಧರಾಮ ಎಲ್ಲಿಯೂ ಸಿಗಲಿಲ್ಲ. ದಾರಿಯುದ್ದಕ್ಕೂ ಅದೇ ವ್ಯಾಕುಲತೆಯಿಂದ ಮಲ್ಲಯ್ಯನನ್ನು ಕರೆದು ಸಿದ್ಧರಾಮ, ಶ್ರೀಶೈಲ ತಲುಪಿದ ನಂತರ ಆ ಜನರ ಗುಂಪು ಶ್ರೀಶೈಲಮಲ್ಲಿಕಾರ್ಜುನನ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿರುವ ಮಲ್ಲಿಕಾರ್ಜುನ ಶಿವಲಿಂಗವನ್ನು ತೋರಿಸಿದರು. ಇದರಿಂದ ತೃಪ್ತಿಯಾಗದ ಸಿದ್ಧರಾಮನು, ತಾನು ಹಿಂದೆ ನವಣೆಯ ಹೊಲದಲ್ಲಿ ಜಂಗಮವೇಷದಲ್ಲಿ ನೋಡಿದ ಮಲ್ಲಯ್ಯನನ್ನೇ ನೋಡಬೇಕೆಂದು ಅತ್ಯಂತ ವ್ಯಾಕುಲತೆಯಿಂದ ಶ್ರೀಶೈಲದ ಪರ್ವತ, ಕಾಡು, ಮೇಡು ಕೊಳಗಳನ್ನೆಲ್ಲ ಹುಡುಕಿದ. ಕೊನೆಗೆ ತನ್ನ ದುಃಖದ ಕಟ್ಟೆಯೊಡೆದು, ಶಿವನನ್ನು ನೋಡದ ತನ್ನ ಜೀವನ ವ್ಯರ್ಥವೆಂದು 'ರುದ್ರಗಮ್ಮರಿ' ಎನ್ನುವ ಕಡಿದಾದ, ಆಳವಾದ ಪ್ರಪಾತದ ಹತ್ತಿರ ನಿಂತು, ''ನೀನು ನನಗೆ ದರ್ಶನ ಕೊಡದಿದ್ದರೆ ಈಗಲೇ ನನ್ನ ಪ್ರಾಣವನ್ನು ಅರ್ಪಿಸುತ್ತೇನೆ'' ಎಂದು ಪ್ರಪಾತಕ್ಕೆ ಹಾರುವ ಕ್ಷಣಕ್ಕೆ ಶಿವನು ಸಿದ್ಧರಾಮನ ಕೈಯನ್ನು ಹಿಡಿದು ರಕ್ಷಿಸುತ್ತಾನೆ. ಶಿವನು ತನ್ನ ನಿಜ ಸ್ವರೂಪವನ್ನು ಸಿದ್ಧರಾಮನಿಗೆ ತೋರಿಸುತ್ತಾನೆ. ಪರಮಮಂಗಳ ಮೂರ್ತಿಯನ್ನು ನೋಡಿದ ಸಿದ್ಧರಾಮನ ಆನಂದವನ್ನು ವರ್ಣಿಸುವುದ ಅಸಾಧ್ಯ. ಬಾಲ್ಯದಲ್ಲೇ ಮೊಳೆತ ಶಿವಭಕ್ತಿ ಸಿದ್ಧರಾಮನಿಗೆ ಶಿವಸಾಕ್ಷಾತ್ಕಾರವನ್ನು ಒದಗಿಸಿತು. ಶಿವಯೋಗದ ಸ್ಥಿತಿಯನ್ನು ಶಿವಸಾಕ್ಷಾತ್ಕಾರದಲ್ಲಿ ಕಂಡುಂಡ ಸಿದ್ಧರಾಮನ ಮನಸ್ಸು ಶಾಶ್ವತವಾಗಿ ಸಮಾಧಿಯಲ್ಲಿಯೇ ನೆಲೆಸಲು ಬಯಸುತ್ತದೆ. ಆತ್ಮಕಲ್ಯಾಣವೊಂದೇ ಜೀವನದ ಪರಮಧ್ಯೇಯವೆಂದು ಗಣಿಸುವುದಾದರೆ, ಬಾಲ್ಯದಲ್ಲಿಯೇ ಅದನ್ನು ಸಾಧಿಸಿದ ಸಿದ್ಧರಾಮನಿಗೆ ಮರಳಿ ಲೌಕಿಕದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಆವಶ್ಯಕತೆ ಇರಲಿಲ್ಲ. ಇಂತಹ ಭಾವನೆಗೆ ಸಿದ್ಧರಾಮನ ಮನಸ್ಸು ಕ್ಷಣಹೊತ್ತು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಆದರೆ ಆತ್ಮಕಲ್ಯಾಣವೊಂದೇ ಜೀವನದ ಧ್ಯೇಯವಲ್ಲ, ಇದಕ್ಕಿಂತ ಉದಾತ್ತವಾದ ಧ್ಯೇಯವು ಆತ್ಮಕಲ್ಯಾಣದೊಂದಿಗೆ ಲೋಕಕಲ್ಯಾಣವನ್ನು ಸಾಧಿಸುವುದರಲ್ಲಿದೆ, ಎಂಬುದರ ಅರಿವನ್ನು ಪರಶಿವನು ಸಿದ್ಧರಾಮನಲ್ಲಿ ಉಂಟುಮಾಡಿಸಿ, ಅವನನ್ನು ಸೊನ್ನಲಿಗೆಗೆ ವಾಪಸ್ಸು ಕಳುಹಿಸಿಕೊಡುತ್ತಾನೆ. ಬರುವಾಗ ಕ್ಷೇತ್ರ ಪರಿಕಲ್ಪನೆ, ಲಿಂಗ ಸ್ಥಾಪನೆಗಳ ರೂಪದಲ್ಲಿ ಕರ್ಮಯೋಗದ ದೀಕ್ಷೆಯನ್ನು ಹೊತ್ತುಕೊಂಡು ಬರುತ್ತಾನೆ.

ಶ್ರೀಶೈಲದಿಂದ ಸೊನ್ನಲಿಗೆಗೆ ಮರಳಿ ಬಂದ ಸಿದ್ಧರಾಮನು ಮನೆ, ಮಾರು ತಂದೆ ತಾಯಿಗಳು ಎಂಬ ಚಿಕ್ಕ ಜಗತ್ತನ್ನು ಬಿಟ್ಟು, ವಿಶಾಲ ಜಗತ್ತಿನಲ್ಲಿ ಕಾಲಿಡುತ್ತಾನೆ. ಸೊನ್ನಲಿಗೆಯಲ್ಲಿ ಮಠವೊಂದನ್ನು ಕಟ್ಟಿ ಕರ್ಮಯೋಗದ ಸಾಧನೆಗೆ ಸಿದ್ಧನಾಗುತ್ತಾನೆ. ಸೊನ್ನಲಿಗೆಯನ್ನು ಯೋಗರಮಣೀಯ ಸುಕ್ಷೇತ್ರವನ್ನಾಗಿ ಮಾಡುವ ಭಾವನೆ ಆತನಲ್ಲಿ ಸುಳಿಯುತ್ತಿದ್ದಂತೆ ಸೊನ್ನಲಿಗೆಯ ಅಧಿಪತಿ ನನ್ನಪ್ಪನ ಹೆಂಡತಿ ಚಾಮಲಾದೇವಿ ಶಿವನಿಲಯಕ್ಕೆ ಬೇಕಾಗುವ ಭೂಮಿಯನ್ನು ದಾನವಾಗಿ ಕೊಡುತ್ತಾಳೆ. ರೇವಣಸಿದ್ಧರ ಸಂಕೇತದಂತೆ ಮಲ್ಲಿಕಾರ್ಜುನ ದೇವಾಲಯದ ನಿರ್ಮಾಣ ಕಾರ್ಯವು ಮುಗಿಯುತ್ತಲೇ ಹದಿನೇಳು ಲಿಂಗಗಳನ್ನು ಪ್ರತಿಷ್ಠಾಪನೆಗೈಯುವನು. ದಾನಧರ್ಮಗಳನ್ನು ಮಾಡುವ ಕಾರ್ಯ ಅವ್ಯಾಹತವಾಗಿ ಸಾಗುತ್ತದೆ. ದಾಸೋಹ ಸತ್ರವನ್ನು ಪರಿಕಲ್ಪಿಸಿ ಕೇವಲ ಮಾನವರಿಗಷ್ಟೇ ಅಲ್ಲ, ಸಕಲ ಜೀವರಾಶಿಗಳಿಗೆ ಆಹಾರ ನೀಡುವ ವ್ಯವಸ್ಥೆಯನ್ನು ಮಾಡುತ್ತಾನೆ. ನಿತ್ಯಹೋಮವನ್ನು ಆಚರಿಸುತ್ತಾನೆ. ಮಾನವ, ಪಶುಪಕ್ಷಿ, ಕ್ರಿಮಿಕೀಟಗಳಿಗೆ ನೀರು ಕುಡಿಯಲೆಂದು ಕೆರೆಗಳನ್ನು ನಿರ್ಮಿಸುತ್ತಾನೆ. ಇಷ್ಟರಲ್ಲೇ ಸಿದ್ಧರಾಮನ ಕೀರ್ತಿ ಎಲ್ಲ ಲೋಕಗಳಲ್ಲಿ ವ್ಯಾಪಿಸುತ್ತದೆ. ದೇಶ ವಿದೇಶಗಳಿಂದ ರಾಜ, ಮಹಾರಾಜರುಗಳು, ಮಂತ್ರಿಸಾಮಂತರು ಸೊನ್ನಲಿಗೆಯತ್ತ ಆಕರ್ಷಿತರಾಗಿ ಬಂದು ಸಿದ್ಧರಾಮನು ಕೈಗೊಂಡ ಸಮಾಜಸೇವಾಕಾರ್ಯದಲ್ಲಿ ನೆರವಾಗುವರು.

ಸಿದ್ಧರಾಮ ಶಿವಯೋಗಿ ಆಜನ್ಮ ಬ್ರಹ್ಮಚಾರಿಯಾಗಿ ಸಂನ್ಯಾಸ ಜೀವನವನ್ನು ನಡೆಸಿದನು. ಓರ್ವ ಕಾರಣಿಕ ಪುರುಷನಾಗಿಯೂ ತನ್ನ ಅಪೂರ್ವಯೋಗಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿದ ಮಹಿಮಾಶಾಲಿ ಅವನು. ಒಮ್ಮೆ ಅಲ್ಲಮಪ್ರಭುಗಳು ಕಲ್ಯಾಣದಿಂದ ಸೊನ್ನಲಿಗೆಗೆ ಬಂದು ಶಿವಯೋಗಿ ಸಿದ್ಧರಾಮನನ್ನು ಭೇಟಿಯಾಗಿ ಅವನನ್ನು ಕಲ್ಯಾಣಕ್ಕೆ ಕರೆತರುತ್ತಾರೆ. ಕಲ್ಯಾಣದ ಅನುಭವ ಮಂಟಪದಲ್ಲಿ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ ಇನ್ನೂ ಮುಂತಾದ ಅನೇಕ ಶರಣರ ಸಮ್ಮುಖದಲ್ಲಿ ಇಷ್ಟಲಿಂಗದ ಅಗತ್ಯತೆಯನ್ನು ಚರ್ಚಿಸಿದನು. ಶಿವಯೋಗಿ ಸಿದ್ಧರಾಮನು ಚೆನ್ನಬಸವಣ್ಣನವರನ್ನು ತನ್ನ ಗುರುವಾಗಿ ಸ್ವೀಕರಿಸಿ ಅವರಿಂದ ಇಷ್ಟಲಿಂಗ ದೀಕ್ಷೆಯನ್ನು ಪಡೆದುಕೊಳ್ಳುತ್ತಾನೆ.

ಕಲ್ಯಾಣದ ಆಧ್ಯಾತ್ಮಿಕ ವಾತಾವರಣದಲ್ಲಿ ಸಿದ್ಧರಾಮ ಶಿವಯೋಗಿ ತನ್ನ ಉತ್ತರಾರ್ಧ ಜೀವನದ ಕೆಲವು ಸಾರವತ್ತಾದ ದಿನಗಳನ್ನು ಕಳೆದನು. ಕಲ್ಯಾಣದಲ್ಲಿ ಅಂದಿನ ವೀರಶೈವಾಂದೋಲನದ ಅಧ್ವರ್ಯುಗಳಾದ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದವರನ್ನು ತನ್ನ ವಚನ ತ್ರಿವಿಧಗಳಲ್ಲಿ ಕಂಠೋಕ್ತವಾಗಿ ಹೊಗಳಿದ್ದಾನೆ.

ಕಾಲಾನಂತರದಲ್ಲಿ ಚೆನ್ನಬಸವಣ್ಣನ ನಂತರ ಶಿವಯೋಗಿ ಸಿದ್ಧರಾಮನು ಶೂನ್ಯಸಿಂಹಾಸನದ ಉತ್ತರಾಧಿಕಾರಿಯಾದನು.



ಶ್ರೀ ಸಿದ್ಧರಾಮೇಶ್ವರ ದೇವಾಲಯ, ಸೊಲ್ಲಾಪುರ

ಅನುಭವ ಮಂಟಪದ ವಿವಿಧ ಚರ್ಚೆಗಳಲ್ಲಿ ಭಾಗವಹಿಸಿದ್ದನು. ಶಿವಯೋಗಿ ಸಿದ್ಧರಾಮನು ಕ್ರಿ.ಶ. ೧೧೩೦ರಿಂದ ಕ್ರಿ.ಶ.೧೧೮೦ರ ವರೆಗೆ ಬಾಳಿ ಬದುಕಿದ್ದನೆಂದು ಅಂದಾಜಿಸಲಾಗಿದೆ. ಒಟ್ಟು ೬೮,೦೦೦ ವಚನಗಳನ್ನು ಬರೆದಿದ್ದು ಅದರಲ್ಲಿ ಕೇವಲ ೧೩೭೯ ವಚನಗಳು ಮಾತ್ರ ಲಭ್ಯವಿದೆ. ವಚನಗಳಲ್ಲಿ 'ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ಅಂಕಿತನಾಮವನ್ನು ಬಳಸಿದ್ದಾರೆ. ವಚನಗಳನ್ನು ಹೊರತುಪಡಿಸಿ, 'ಯೋಗಿನಾಥ' ಎಂಬ ಅಂಕಿತದೊಂದಿಗೆ ತ್ರಿಪದಿಯಲ್ಲಿ ಹಲವಾರು ಭಕ್ತಿ ಕೃತಿಗಳನ್ನು ಬರೆದಿದ್ದಾರೆ.

ಕಲ್ಯಾಣ ಕ್ರಾಂತಿಯ ನಂತರ ಸೊನ್ನಲಿಗೆಗೆ ಮರಳಿದ ಶಿವಯೋಗಿ ಸಿದ್ಧರಾಮನು ತನ್ನ ಕೆಲಸವನ್ನು ಹಾವಿನಾಳ ಕಲ್ಲಯ್ಯ ಎಂಬ ಶರಣರಿಗೆ ಒಪ್ಪಿಸಿ, ಸರೋವರದ ಮಧ್ಯದಲ್ಲಿ ಒಂದು ಗುಹೆಯನ್ನು ನಿರ್ಮಿಸಿ, ಶಿವಯೋಗದ ಮೂಲಕ ಐಕ್ಯಸ್ಥಿತಿಯನ್ನು ಪಡೆದನು.


***ಆಧಾರ ಗ್ರಂಥಗಳು:***

*೧) ರಾಘವಾಂಕ ವಿರಚಿತ **'ಸಿದ್ಧರಾಮ ಚಾರಿತ್ರ'**, ಗದ್ಯಾನುವಾದ : ಆರ್. ಎಸ್. ರಾಮರಾವ್*

*೨) **ಸಿದ್ಧರಾಮ ಶಿವಯೋಗಿ** – ಸಂಶೋಧನ ಗ್ರಂಥಮಾಲೆ –ಎಂ.ಬಿ. ಕೊಟ್ರಶೆಟ್ಟಿ*

*೩) **ಸಿದ್ಧರಾಮೇಶ್ವರ ವಚನ ಸಂಪುಟ** (ಸಮಗ್ರ ವಚನ ಸಂಪುಟ–೪), ಪ್ರ: ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.*